itself. There is no difficulty at all. Why you are taking Unnecessary risk ? Tomorrow, if anybody goes and gets a stay order from the Court, the entire House will be blamed.

ಶ್ರೀ ಎಸ್.ಎಸ್.ಪಾಟೀಲ್ : ಅಧ್ಯಕ್ಷರೇ ಕೋರ್ಟ್‌ಗೆ ಹೋದರೆ ಆ ರೀತಿ ಆಗುತ್ತದೆ ಈ ರೀತಿ ಆಗುತ್ತದೆ ಎಂದು ಹೇಗೆ ಊಹೆ ಮಾಡುವುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ ಅಂದರೆ ನಾವು ಹೇಳುವುದೆಲ್ಲಾ ಹೇಳಿದ್ದೇವೆ, ಇನ್ನು ಮೇಲೆ ನಿಮ್ಮಿಷ್ಟ.

ಶ್ರೀ ಎಸ್.ಎಸ್.ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಕೋರ್ಟಿಗೆ ಹೋದರೆ ಹಾಗೆ ಆಗುತ್ತೆ, ಹೀಗೆ ಆಗುತ್ತೆ ಸರಕಾರಕ್ಕೆ ಅಪಮಾನವಾಗುತ್ತದೆ, ಎಂದು ಇವರು ಊಹೆ ಮಾಡುತ್ತಿದ್ದಾರೆ. ನಾವು ಹಲವಾರು ಸಂದರ್ಭಗಳಲ್ಲಿ ಕೋರ್ಟಿನಲ್ಲಿ ನೋಡಿದ್ದೇವೆ, ಅವರ ಅವಧಿಯೂ ಮುಗಿದಿರುವುದರಿಂದ, ಅವರಿಗೂ ಕೂಡ ಯಾರೂ ಹೋದರೂ ಕುಡ ಸ್ಟೇ ಸಿಗಲಿಕ್ಕಿಲ್ಲ. ಆ ಕಾರಣದಿಂದ ಸರ್ಕಾರ ಮಾಡಿರುವುದು ಇದು ಸರಿ ಇದೆ, ಸುಮ್ಮನೆ ಇದರ ಬಗ್ಗೆ ತಿಕ್ಕಾಟಡ ಬೇಡ ಮುಂದುವರೆಯಿರಿ, ಸರ್ಕಾರ ಮಾಡುವುದು ಸರಿ ಇದೆ. ಯಾವ ತಪ್ಪು ಆಗುವುದಿಲ್ಲ.

ಶ್ರೀ ಹೆಚ್.ಕೆ.ಪಾಟೀಲ್ : ಸರ್ಕಾರ ಸಾಕಷ್ಟು ಚಿಂತನೆ ಮಾಡಿ ನಮಗೆ ಇರತಕ್ಕಂಥ ಕಾನೂನು ಅವಕಾಶಗಳ ಕೆಳಗೆ ಉದ್ಭವವಾಗಿರತಕ್ಕಂಥ ಸನ್ನಿವೇಶದಲ್ಲಿ ನಮ್ಮ ದಿನನಿತ್ಯದ ಆಡಳಿತವೂ ನಡೆಯಬೇಕು, ಜಿಲ್ಲಾ ಪಂಚಾಯಿತಿಗಳು ನಡೆಯಬೇಕು, ಆ ಒಂದು ಹಿನ್ನೆಲೆಯಲ್ಲಿ ನಾವು 321 ರ ಸೆಕ್ಷನ್‌ರ ಕೆಳಗೆ ಆ ಕ್ರಮವನ್ನು ತೆಗೆದುಕೊಂಡಿದ್ದೇವೆ, ಆ ಕ್ರಮ ಕಾನೂನಾತ್ಮಕವಾಗಿದೆ. ಹಗೂ ಅದು ಅನಿವಾರ್ಯದ ಕ್ರಮ ಎನ್ನುವ ಕರಣಕ್ಕೆ ಅದನ್ನು ನಾವು 321 ಬಳಕೆ ಮಾಡಿದ್ದೇವೆ, ಅಷ್ಟು ಬಿಟ್ಟರೆ ಬೇರೆ ಏನೂ ಇಲ್ಲ.....

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಸರಿಯಿಲ್ಲವೆಂದು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಇದು ಸರಿಯಿಲ್ಲ ನಾವು ಕೂಡ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್ ಹಾಗೂ ಜಿ.ವಿ. ಶ್ರೀರಾಮರೆಡ್ಡಿ ಯವರು ಸರ್ಕಾರ ವಿರುದ್ಧ ಧಿಕ್ಕಾರಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು).

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಛೇರ್ಮನ್‌ರವರೆ, ನಾನು ಮಾನ್ಯ ಕಾನೂನು ಸಚಿವರ ಹತ್ತಿರ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗಾಗಲೇ ನನ್ನ ಅಭಿಪ್ರಾಯವನ್ನು ತಮಗೆ ಹೇಳಿದ್ದೇನೆ. ಮತ್ತೆ ತಾವು ಪುನಃ ಕಾನೂನು ತಜ್ಞರ ಜೊತೆಯಲ್ಲಿ ಕುಳಿತು ಇದರ ಬಗ್ಗೆ ಚರ್ಚೆ ಮಾಡಿ ಅವಶ್ಯಕತೆ ಇದ್ದರೆ ಇದಕ್ಕೊಂದು ತಿದ್ದುಪಡಿ ತೆಗೆದುಕೊಂಡು ಬರಬಹುದು. ಏಕೆಂದರೆ ಯಾವುದೇ ಕಾರಣಕ್ಕೂ ಇದು ಕೋರ್ಟ್‌ಗೆ ಹೋಗಿ ಸ್ಟೇ ಆಗಬಾರದು. ಒಂದು ವೇಳೆ ಇದರ ಉದ್ದೇಶವೇ ಕೋರ್ಟ್‌ನಲ್ಲಿ ಸ್ಟೇ ಆಗುವುದಾದರೆ ಏನೂ ತೊಂದರೆ ಇಲ್ಲ. ಒಟ್ಟಿನಲ್ಲಿ ಇದಕ್ಕೆ ಏನಾದರೂ ಬಚಲಾವಣೆ ತರುವುದಾದರೆ ಇವತ್ತು ಸಾಯಂಕಾಲ ಬಿಲ್ ಒಂದನ್ನು ತಯಾರು ಮಾಡಿ ನಾಳೆ ಬೆಳಿಗ್ಗೆ ಇಲ್ಲಿ ಇಂಟ್ರೊಡ್ಯೂಸ್ ಮಾಡಬಹುದು. ಆದ್ದರಿಂದ, ಇದರ ಬಗ್ಗೆ ಏನಾದರೂ ಇದ್ದರೆ ಚರ್ಚೆ ಮಾಡಿ ಒಂದು ಬಿಲ್ ತರಬೇಕೆಂದು ನಾನು ತಮ್ಮ ಹತ್ತಿರ ವಿನಂತಿ ಮಾಡಿಕೊಳ್ಳುತ್ತೇನೆ. I Understand difficulty of the government.

ಈಗ ಏನಾಗಿದೆ ಎಂದರೆ, ಅವರನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ ಮತ್ತೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದಕ್ಕೂ ಕೂಡ ಆಗುವುದಿಲ್ಲ. 239 ರಲ್ಲಿ ಇರತಕ್ಕಂಥಾದ್ದು ಅಂದರೆ, if there is a stay order from the court ಎಂದು. ಅದನ್ನೇ ಕೋರ್ಟ್ ಆರ್ಡರ್ ಎಂದು ಇಂಟರ್‌ಪ್ರಿಟ್ ಮಾಡಬಹುದಾಗಿದೆ. When there is a court order; court says within three months ..... ಅಷ್ಟರೊಳಗೆ ನೀವೊಂದು ತಿದ್ದುಪಡಿ ತೆಗೆದುಕೊಂಡುಬನ್ನಿ. ಅಲ್ಲಿಯವರೆಗೆ ಚುನಾವಣೆಯನ್ನು ಹೋಲ್ಡ್ ಮಾಡಬೇಡಿ ಎಂದು ಆಯಿತು. ಆದ್ದರಿಂದ, ಇದರ ಬಗ್ಗೆ ಒಂದು ತಿದ್ದುಪಡಿ ತೆಗೆದುಕೊಂಡು ಬನ್ನಿ.

ಶ್ರೀ ಎಸ್.ರಾಜೇಂದ್ರನ್: ಮೂರು ತಿಂಗಳಿಗೋಸ್ಕರ ಆಡಳಿತಾಧಿಕಾರಿ ಗಳನ್ನು ನೇಮಕ ಮಾಡಲು ಪರ್ಮಿಷನ್ ತೆಗೆದುಕೊಳ್ಳಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಈಗ ಅದನ್ನೇ ಸ್ಟೇ ಆರ್ಡರ್ ಎಂದು ಇಂಟರ್‌ಪ್ರಿಟ್ ಮಾಡುವುದಾದರೆ then it is fine.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿರತಕ್ಕಂಥ ಸಲಹೆಯನ್ನು ನಾವು ಕೇಳಿದ್ದೇವೆ. ಅದನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಈಗ ನಾವು ಇಷ್ಟೆಲ್ಲಾ ಚರ್ಚೆ ಮಾಡಿರತಕ್ಕಂಥದ್ದು ಮತ್ತು ವಾದ ಮಾಡಿರತಕ್ಕದರ ಪರಿಣಾಮ ಸಹಜವಾಗಿ ನಮ್ಮನ್ನು ಈ ದಿಸೆಯಲ್ಲಿ ವಿಚಾರ ಮಾಡುವುದಕ್ಕೆ ಹಚ್ಚುತ್ತದೆ. ಅವಶ್ಯಕತೆ ಅನಿಸಿದರೆ ಖಂಡಿತ ಮಾಡುತ್ತೇನೆ. ಈಗಾಗಲೇ ಸಾಕಷ್ಟು ವಿಚಾರ ಮಾಡಿ ಇದೇ ಸರಿಯಾದ ನಿರ್ಣಯವೆಂದು ಇದನ್ನು ತೆಗೆದುಕೊಂಡಿದ್ದೇವೆ. ಆದರೆ, ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ ಅವುಗಳನ್ನೂ ಕೂಡ ನಾವು ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಛೇರ್ಮನ್‌ರವರೆ, ನನಗೆ ಗೊತ್ತಿರುವ ಪ್ರಕಾರ ಈ ಶಾಸನ ಸಭೆಗೆ ಒಳ್ಳೆಯ ಇತಿಹಾಸ ಇದೆ. ಮತ್ತೆ ನಾನೇನು ಕಾನೂನು ತಜ್ಞನಲ್ಲ ಮತ್ತು ಕಾನೂನು ಪದವೀಧರ ಕೂಡ ಅಲ್ಲ. ನಾನೊಬ್ಬ ಹಳ್ಳಿಯ ರೈತನ ಮಗ. ಆದರೆ ನಾನು ತಮಗೆ ಬಹಳ ಸ್ಪಷ್ಟವಾಗಿ ಹೇಳುತ್ತೇನೆ ಈ ಸೆಕ್ಷನ್ 239 ಪ್ರಕಾರ ಇದನ್ನು ಮಾಡುವುದಕ್ಕೆ ಬರುವುದಿಲ್ಲ. ಈ ಆಕ್ಟ್‌ನ್ನು ಮಾಡಿಕೊಳ್ಳ ತಕ್ಕಂಥ ಕಾಲದಲ್ಲಿ ನಾವು ಅಧಿಕಾರ ವಿಕೇಂದ್ರಿಕರಣಕ್ಕೆ ಬದ್ಧರಾಗಿದ್ದೇವೆಂದು ನಾವು ಇದಕ್ಕೆ ಪ್ರಾವಿಜನ್ ಮಾಡಿಕೊಳ್ಳಲಿಲ್ಲ. ಆದರೆ, ಇಂಥ ಒಂದು ವಿಶೇಷವಾದಂಥ ಸಂದರ್ಭ ಬಂದಾನ ನಾವು ತಿದ್ದುಪಡಿ ಮಾಡಿಕೊಳ್ಳಬೇಕಾಗಿತ್ತು. ಆದ್ದರಿಂದ ಈಗಲಾದರೂ ಒಮದು ತಿದ್ದುಪಡಿ ತಂದು ಆಡಳಿತಾಧಿಕಾರಿಗಳನ್ನು ನೇಮಕ ಮಾಡತಕ್ಕಂಥಾದ್ದನ್ನು ಮಾಡಿ. ಈಗ ಇರತಕ್ಕಂಥ ಕಾನೂನಿನ ಪ್ರಕಾರ ಅಡ್ಮಿನಿಸ್ಟ್ರೇಟರ್ ಅನ್ನು ನೇಮಕ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಾಳೆ ದಿವಸ ಇದು ಹೈಕೋರ್ಟ್‌ಗೆ ಹೋಗಿ ಅವರು ಛೀಮಾರಿ ಹಾಕಿ ಮರ್ಯಾದೆ ಕಳೆದುಕೊಳ್ಳುವಂಥಾದ್ದು ಆಗುವುದು ಬೇಡ. ಈ ಶಾಸನಸಭೆಗೆ ಇರತಕ್ಕಂಥ ಇತಿಹಾಸವನ್ನು ತಮಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಇದರ ಬಗ್ಗೆ ಮಾನ್ಯ

ಅಧ್ಯಕ್ಷರ ಕಛೇರಿಯಲ್ಲಿ ಕುಳಿತು ಚರ್ಚೆ ಮಾಡೋಣ. ತಾವು ಮತ್ತೊಂದು ಸಾರಿ ಕಾನೂನು ತಜ್ಞರ ಅಭಿಪ್ರಾಯವನ್ನು ಕೇಳಿ ಆಮೇಲೆ ಬೇಕಾದರೆ ಇದನ್ನು ಇಂಟ್ರೊಡ್ಯೂಸ್ ಮಾಡುವುದಕ್ಕೆ ನಮ್ಮ ಸಮ್ಮತಿ ಇದೆ ಎಂದು ಹೇಳಿದ ಮೇಲೂ ಕೂಡ ನೀವು ಮೊಂಡುತನ ಮಾಡಿಕೊಂಡು ಇಲ್ಲಾ ನಾವು ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವಂಥ ಆಜ್ಞೆ ಸರಿ ಇದೆ ಎಂದು ಹೇಳುವುದಾದರೆ ಈ ಒಂದು ಕಾನೂನು ಬಾಹಿರವಾಗಿರತಕ್ಕಂಥ ಶಾಸನವನ್ನು ತರುವುದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ ಎನ್ನುವುದು ಇತಿಹಸದಲ್ಲಿ ಬರುವುದು ಬೇಡ. ನಮಗೆ ಇದು ಒಪ್ಪಿಗೆ ಇಲ್ಲದೇ ಇರುವುದರಿಂದ ನಾವು ಸದನದಿಂದ ಹೊರಗಡೆಗೆ ಹೋಗುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

(ಗೊಂದಲ)

ಎಂ.ಪಿ.ವೆಂಕಟೇಶ್ : ಮಾನ್ಯ ಛೇರ್ಮನ್‌ರವರೆ, ಇದು ಇವರದು ಯಾವಾಗಲೂ ಕೂಡ ಮಾಮೂಲಿನ ಕತೆ. ಕೇವಲ ಪ್ರಚಾರ ಮಾಡಬೇಕಷ್ಟೆ ಹೊರತು ಬೇರೆ ಏನ ಕೆಲಸ ಇವರಗೆ ಇಲ್ಲ. ಸರ್ಕಾರ ನಡೆಸತಕ್ಕಂಥವರಿಗೆ ಕಾನೂನು ಗೊತ್ತಿರುವುದಿಲ್ಲವೆ ? ಇವರು ಕೇವಲ ಪ್ರಚಾರಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ. ದಿನ ಬೆಳಗಾದರೆ ಇವರದ್ದು ಪ್ರಚಾರವಷ್ಟೆ. ಬಡವರ ಬಗ್ಗೆ ಆಗಲಿ, ರೈತರ ಬಗ್ಗೆ ಆಗಲಿ ಕೆಲಸ ಮಾಡುವುದಕ್ಕೆ ಆಗಲಿ ಇವರು ಬಿಡುವುದಿಲ್ಲ.

(ಗೊಂದಲ)

ಛೇರ್ಮನ್ : ಈಗ ಶೂನ್ಯ ವೇಳೆ. ಮೊದಲಿಗೆ ಡಾ: ಕೆ.ಅನ್ನದಾನಿಯವರು ಮಾತನಾಡಿ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ :– ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಿಗೆ ಇಂಗ್ಲೀಷ್ ಭಾಷೆಯನ್ನು ಕಲಿಸುವ ಬಗ್ಗೆ

ಡಾ:ಕೆ.ಅನ್ನದಾನಿ (ಮಳವಳ್ಳಿ) : ಸನ್ಮಾನ್ಯ ಛೇರ್ಮನ್‌ರವರೆ, ನಾನು ಈ ಸಭೆಯ ಗಮನವನ್ನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ. ಪ್ರಾಥಮಿಕ ಹಂತದಿಂದ ಮಕ್ಕಳಿಗೆ ಇಂಗ್ಲೀಷ್ ಭಾಷೆಯನ್ನು ಕಲಿಸಬೇಕು ಎನ್ನತಕ್ಕಂಥ ಒಂದು ಉದ್ದೇಶವನ್ನು ಇಟ್ಟುಕೊಂಡು ಸರ್ಕಾರ ಒಂದು ಒಳ್ಳಯ ತೀರ್ಮಾನವನ್ನು ತೆಗೆದುಕೊಳ್ಳುವ ಹಂತದಲ್ಲಿದೆ. ಆದರೆ, ಇವತ್ತು ಕೆಲವು